**SC No. 257/2021**
**PW-17**

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

**ಎಸ್. ಸಿ. 257/2021**

| | | |
|---|---|---|
| ಸಾಕ್ಷಿದಾರರ ಹೆಸರು | ಸುಶೃತ್ | ಪ್ರಮಾಣ ವಚನ ಮಾಡಿದ ದಿನಾಂಕ: 25.02.2026 |
| ತಂದೆಯ/ಗಂಡನ ಹೆಸರು | ಜಿ.ಸಿ ಶಶಿಧರ್ | |
| ವಯಸ್ಸು | 33 ವರ್ಷ | |
| ವೃತ್ತಿ | Assistant Executive engineer, Mysore city corporation. | ಪ್ರಾ.ಸಾಃ 17 |
| ವಾಸ ಸ್ಥಳ | ಮೈಸೂರು | ಹೆಚ್ಚುವರಿ ಸಾಕ್ಷಿ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು 2020 ನೇ ಇಸವಿ ಜುಲೈ ತಿಂಗಳಿನಿಂದ ಮೈಸೂರು ಸಿಟಿ ಕಾರ್ಪೋರೇಶನ್ ನಲ್ಲಿ Assistant Executive engineer ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 07.11.2020 ರಂದು ಕೆ.ಆರ್. ಪೊಲೀಸ್ ಠಾಣೆಯ ಮೊ.ಸಂಖ್ಯೆ 97/2020 ಪ್ರಕರಣದಲ್ಲಿನ ಘಟನಾ ಸ್ಥಳ ಜೆ.ಎಸ್.ಎಸ್. ಆಸ್ಪತ್ರೆಯ ಮುಖ್ಯ ದ್ವಾರದ ಮುಂಭಾಗದ ಸ್ಥಳ ದ ನಕಾಶೆಯನ್ನು ತಯಾರಿಸಿಕೊಡುವಂತೆ ಮನವಿ ಮಾಡಿಕೊಂಡಿದ್ದು ನಾನು ಅದೇ ದಿನಾಂಕ ಘಟನಾ ಸ್ಥಳ ಕ್ಕೆ ಭೇಟಿ ಕೊಟ್ಟು ಕೆ.ಆರ್. ಪೊಲೀಸ್ ಠಾಣೆಯ ಸಿಬ್ಬಂದಿ ತೋರಿಸಿದ್ದ ಸ್ಥಳ ದಲ್ಲಿ ನಕಾಶೆಯನ್ನು ತಯಾರು ಮಾಡಿದ್ದೆನು. ನನ್ನ ಜೊತೆಯಲ್ಲಿ ಜುನೀಯರ್

ಇಂಜಿನಿಯರ್ ಇದ್ದರು. ನಾನು ಆ ದಿನ ತಯಾರು ಮಾಡಿದ್ದ ನಕಾಶೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.20 ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿದಾರರ ಸಹಿಯನ್ನು **ನಿಪಿ.20(ಎ)** ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ :</u>**

ಕೆ.ಆರ್. ಪೊಲೀಸ್ ಠಾಣೆಯಿಂದ ನಮ್ಮ ಕಛೇರಿಗೆ ಲಿಖಿತ ಮನವಿ ಬಂದಿತ್ತು. ನನಗೆ ಸಹಾಯಕ ಆಯುಕ್ತರು ಲಿಖಿತ ಮನವಿ ಬಗ್ಗೆ ನನಗೆ ತಿಳಿಸಿದ್ದರು. ಸ್ಥಳ ವನ್ನು ಪೊಲೀಸ್ ಸಿಬ್ಬಂದಿ ತೋರಿಸಿದ್ದರು. ನನ್ನ ಸ್ಕೆಚ್ ಪ್ರಕಾರ ಸದರಿ ಸ್ಥಳ ಎಂ.ಜಿ. ರಸ್ತೆ ಜೆ.ಎಸ್.ಎಸ್ ಆಸ್ಪತ್ರೆ ಮುಂಭಾಗ ಎಂದರೆ ಸರಿ. ನಾನು ಪೊಲೀಸರ ಕೋರಿಕೆ ಮೇರೆಗೆ ಸ್ಕೆಚ್ ಅನ್ನು ತಯಾರಿಸಿರುತ್ತೇನೆ ಎಂದರೆ ಸರಿ.

**<u>ಮರುವಿಚಾರಣೆಃ ಇಲ್ಲ</u>**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**